2019 ಕ.ತೀ.ವ 1493

## ಸನ್ಮಾನ್ಯ ಮುಖ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಹೆಚ್.ಟಿ. ನರೇಂದ್ರ ಪ್ರಸಾದ್

### ಮೆ: ಆನೆ ಮೈನ್ಸ್ ಅಂಡ್ ಮಿನರಲ್ಸ್ –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇನ್ನೊಬ್ಬರು*

ಭಾರತ ಸಂವಿಧಾನದ 226ನೇ ಮತ್ತು 227ನೇ ಅನುಚ್ಛೇದಗಳ ಮೇರೆಗೆ ಈ ರಿಟ್ ಅರ್ಜಿಯನ್ನು ಸಲ್ಲಿಸಲಾಗಿದೆ.

ಗಣಿಗಾರಿಕೆ ಗುತ್ತಿಗೆ ಮಂಜೂರಾತಿಗೆ ಸಂಬಂಧಿಸಿದಂತೆ ದಿನಾಂಕ: 06.01.2017ರ ಸರ್ಕಾರಿ ಆದೇಶವನ್ನು ರದ್ದುಗೊಳಿಸಿ, ದಿನಾಂಕ: 09.06.2010ರ ಮಂಜೂರಾತಿ ಆದೇಶದ ಪ್ರಕಾರ ಗುತ್ತಿಗೆ ಪತ್ರದ ಜಾರಿಗಾಗಿ ಪ್ರತ್ಯರ್ಜಿದಾರರಿಗೆ ನಿರ್ದೇಶಿಸಲು ಹಾಗೂ ಶಾಸನಾತ್ಮಕ ತಿದ್ದುಪಡಿಗಳ ಸಹಿತ ಗಣಿಗಳ ಮತ್ತು ಖನಿಜಗಳ (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1957ರ 8ಎ(3)ನೇ ಪ್ರಕರಣದ ಉಪಬಂಧಗಳಗನುಸಾರವಾಗಿ ಗುತ್ತಿಗೆ ಅವಧಿಯ ವಿಸ್ತರಣೆ ಕೋರಿ ಇದರಲ್ಲಿನ ಅರ್ಜಿದಾರರು ಈ ರಿಟ್ ಅರ್ಜಿಯನ್ನು ಸಲ್ಲಿಸಿದ್ದಾರೆ.

ಈ ರಿಟ್ ಅರ್ಜಿಯಲ್ಲಿ ಸಲ್ಲಿಸಿದ ಆಕ್ಷೇಪವೆಂದರೆ, ದಿನಾಂಕ: 6ನೇ ಜನವರಿ, 2017ರ ಸದರಿ ಆದೇಶವನ್ನು ರಾಜ್ಯ ಸರ್ಕಾರವು ಹೊರಡಿಸಿದ್ದು, ಹಿಂದಿನ ಆದೇಶದ ನಿಬಂಧನೆಗಳಗನುಸಾರವಾಗಿ ಅರ್ಜಿದಾರ ಪರವಾಗಿ ಗುತ್ತಿಗೆಯನ್ನು ಜಾರಿ ಮಾಡಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿ ಮ್ಯಾಂಡಮಾಸ್ ರಿಟ್‌ನ್ನು ನೀಡಲು ಮನವಿ ಮಾಡಿಕೊಳ್ಳಲಾಗಿತ್ತು ಎಂಬುದಾಗಿದೆ.

*ರಿಟ್ ಅರ್ಜಿ ಸಂಖ್ಯೆ: 15824/2018 (ಜಿಎಮ್–ಎಮ್‌ಎಮ್–ಎಸ್), ದಿನಾಂಕ 23ನೇ ಜುಲೈ, 2019.

2015ರ ಅಧಿನಿಯಮ ಸಂಖ್ಯೆ 10ರ ಮೂಲಕ ತಿದ್ದುಪಡಿಯಾದಂತೆ 1957ರ ಸದರಿ ಅಧಿನಿಯಮದ 10–ಎ ಪ್ರಕರಣದ (1)ನೇ ಉಪ–ಪ್ರಕರಣವು ಈ ಮೊಕದ್ದಮೆಯಲ್ಲಿ ಅನ್ವಯವಾಗುತ್ತದೆಯಾದ್ದರಿಂದ, ಗಣಿ ಗುತ್ತಿಗೆಯನ್ನು 1957ರ ಸದರಿ ಅಧಿನಿಯಮದ 10–ಎ ಪ್ರಕರಣದ (2)ನೇ ಉಪ–ಪ್ರಕರಣದ (ಸಿ) ಖಂಡಕ್ಕನುಸಾರವಾಗಿ ಮಾತ್ರ ಜಾರಿಗೊಳಿಸಬಹುದು ಎಂಬುದು ಮಾನ್ಯ ಹೆಚ್ಚುವರಿ ಸರ್ಕಾರಿ ನ್ಯಾಯವಾದಿಯ ನಿವೇದನೆಯಾಗಿದೆ. ದಿನಾಂಕ: 4ನೇ ಮಾರ್ಚ್ 2016ರಿಂದ ಜಾರಿಗೆ ಬಂದಿರುವ 2016ರ ಸದರಿ ನಿಯಮಗಳ ಉಪಬಂಧಗಳ ಕಡೆಗೆ ಅವರು ನಮ್ಮ ಗಮನವನ್ನು ಸೆಳೆದಿದ್ದಾರೆ. ಇದಲ್ಲದೆ ಅವರು, ದಿನಾಂಕ: 11ನೇ ಜನವರಿ 2017ರಂದು ಅಥವಾ ಅದಕ್ಕೆ ಮುಂಚೆ ದಿನಾಂಕ: 19ನೇ ಜೂನ್ 2010ರ ಆದೇಶದ ಆಧಾರದ ಮೇಲೆ ಗುತ್ತಿಗೆಯನ್ನು ಜಾರಿಗೊಳಿಸಿರುವುದರಿಂದ, ಅರ್ಜಿದಾರನು 1957ರ ಸದರಿ ಅಧಿನಿಯಮದ 10ಎ ಪ್ರಕರಣದ (2)ನೇ ಉಪ–ಪ್ರಕರಣದ (ಸಿ) ಖಂಡದ ಅಡಿಯಲ್ಲಿ ತನ್ನ ಹಕ್ಕನ್ನು ಕಳೆದುಕೊಂಡಿದ್ದಾನೆ; ಆದುದರಿಂದ, 1957ರ ಸದರಿ ಅಧಿನಿಯಮದ 10–ಎ ಪ್ರಕರಣದ (1)ನೇ ಉಪ–ಪ್ರಕರಣದ (ಸಿ) ಖಂಡದ ಅಡಿಯಲ್ಲಿ ಆದೇಶವನ್ನು ಹೊರಡಿಸುವುದು ರಾಜ್ಯ ಸರ್ಕಾರಕ್ಕೆ ಕಡ್ಡಾಯವಾಗಿರಲಿಲ್ಲವೆಂದು ವಾದಿಸಿ, 2016ರ ಸದರಿ ನಿಯಮಗಳ 8ನೇ ನಿಯಮದ (4)ನೇ ಉಪ–ನಿಯಮವನ್ನವಲಂಬಿಸಿದ್ದಾರೆ. ಅಲ್ಲದೆ ಅವರು, ಸರ್ವೋಚ್ಚ ನ್ಯಾಯಾಲಯದ ನಿರ್ದೇಶನಗಳಿಗನುಗುಣವಾಗಿ, ಗಣಿಗಾರಿಕೆ ಗುತ್ತಿಗೆಯನ್ನು ಅರ್ಜಿದಾರನು ಕೋರಿರುವಂತೆ ಜಾರಿ ಗೊಳಿಸಲಾಗುವುದಿಲ್ಲವೆಂದು ವಾದಿಸಿದ್ದಾರೆ.

ಈ ನ್ಯಾಯಾಲಯವು ಎರಡೂ ಪಕ್ಷಕಾರರ ವಾದಗಳನ್ನು ಆಲಿಸಿ, ಅವರ ನಿವೇದನೆಗಳನ್ನು ಪರಿಗಣಿಸಿ ಮತ್ತು ಸರ್ವೋಚ್ಚ ನ್ಯಾಯಾಲಯದ ಹಿಂದಿನ ತೀರ್ಪುಗಳು ಮತ್ತು ನಿರ್ದೇಶನಗಳನ್ನು ಅವಲೋಕಿಸಿ ಹಾಗೂ ರಾಜ್ಯ ಸರ್ಕಾರವು ಹೊರಡಿಸಿದ ದಿನಾಂಕ: 19ನೇ ಜೂನ್ 2010ರ ಆದೇಶವನ್ನು ಪರಿಶೀಲಿಸಿ, ದಿನಾಂಕ: 12ನೇ ಜನವರಿ, 2015ಕ್ಕೆ ಮುಂಚೆ ಗಣಿಗಾರಿಕೆ ಗುತ್ತಿಗೆಯ ಮಂಜೂರಾತಿಯ ಆದೇಶವನ್ನು ಹೊರಡಿಸಿ ಈಗಾಗಲೇ ಅದನ್ನು ನಿರ್ಧರಿಸಿರುವುದರಿಂದ, 1957ರ ಸದರಿ ಅಧಿನಿಯಮದ 10–ಎ ಪ್ರಕರಣದ (1)ನೇ ಉಪ–ಪ್ರಕರಣವನ್ನು ಅನ್ವಯಿಸಿ ಅರ್ಜಿದಾರರು ಸಲ್ಲಿಸಿದ

ಅರ್ಜಿಯು ಅನರ್ಹವಾಗುವ ಪ್ರಶ್ನೆಯೇ ಇಲ್ಲವೆಂದು; ದಿನಾಂಕ: 12ನೇ ಜುಲೈ, 2015ರಿಂದ ಜಾರಿಗೆ ಬರುವಂತೆ ತಿದ್ದುಪಡಿಯಾದ 1957ರ ಸದರಿ ಅಧಿನಿಯಮದ 10–ಎ ಪ್ರಕರಣವನ್ನು ಮೊಕದ್ದಮೆಯ ಸಂಗತಿಗಳ ಪರಿಗಣನೆಯಿಂದ ಹೊರಗಿಡಬೇಕಾಗುತ್ತದೆಂದು ಹಾಗೂ ದಿನಾಂಕ: 19ನೇ ಜೂನ್, 2010ರ ಆದೇಶದ ಪರಿಭಾಷೆಯಲ್ಲಿ ಗುತ್ತಿಗೆಯನ್ನು ಜಾರಿಗೊಳಿಸುವುದರಿಂದ ರಾಜ್ಯ ಸರ್ಕಾರವನ್ನು ತಡೆಯುವ ಈ ಮೊಕದ್ದಮೆಯಲ್ಲಿ ತೋರಿಸಿದ ಯಾವುದೇ ಇತರ ನಿರ್ಬಂಧವಿರುವುದಿಲ್ಲವೆಂಬ ನಿರ್ಣಯಕ್ಕೆ ಬಂದಿದೆ.

ಸರ್ವೋಚ್ಚ ನ್ಯಾಯಾಲಯದ ಆದೇಶವು ಅರ್ಜಿದಾರರ ಹಾದಿಗೆ ಅಡ್ಡಬರುವುದಿಲ್ಲ ಮತ್ತು ದಿನಾಂಕ: 6ನೇ ಜನವರಿ 2017ರ ಪ್ರಶ್ನಿತ ಆದೇಶವನ್ನು ಪರಿಶೀಲಿಸಲಾಗಿ, 1957ರ ಸದರಿ ಅಧಿನಿಯಮದ 10–ಎ ಪ್ರಕರಣದ (2)ನೇ ಉಪ–ಪ್ರಕರಣದ (ಸಿ) ಖಂಡವು ಮೊಕದ್ದಮೆಯ ಸಂಗತಿಗಳಿಗೆ ಅನ್ವಯವಾಗುವವು ಎಂಬ ಊಹೆಯ ಆಧಾರದ ಮೇಲೆ ಅದು ಮುಂದುವರೆದಿದೆ ಎಂಬುದು ಕಂಡುಬರುತ್ತದೆ. ಸದರಿ ಊಹೆಯು ಸಂಪೂರ್ಣವಾಗಿ ತಪ್ಪಾದುದಾಗಿದೆ ಎಂಬುದಾಗಿ ಈ ನ್ಯಾಯಾಲಯವು ನಿರ್ಣಯಿಸಿದೆ.

ತದನುಸಾರವಾಗಿ, ಅರ್ಜಿಯು ಯಶಸ್ವಿಯಾಗಿದ್ದು, ಈ ನ್ಯಾಯಾಲಯವು ಈ ಮುಂದಿನ ಆದೇಶವನ್ನು ಹೊರಡಿಸಿದೆ:

ಎ) ದಿನಾಂಕ: 6ನೇ ಜನವರಿ, 2017ರ ಪ್ರಶ್ನಿತ ಆದೇಶವನ್ನು ಈ ಮೂಲಕ ರದ್ದುಗೊಳಿಸಲಾಗಿದೆ ಮತ್ತು ತಳ್ಳಿಹಾಕಲಾಗಿದೆ;

(ಬಿ) ರಿಟ್ ಅರ್ಜಿಯ (2)ನೇ ಮನವಿ ಖಂಡದ ನಿಬಂಧನೆಗನುಸಾರವಾಗಿ ಮ್ಯಾಂಡಮಾಸ್ ರಿಟ್ ಇರುವುದು;

(ಸಿ) ಇಂದಿನಿಂದ ಮೂರು ತಿಂಗಳುಗಳ ಅವಧಿಯ ಒಳಗಾಗಿ ರಾಜ್ಯ ಸರ್ಕಾರವು ಅವಶ್ಯಕ ದಸ್ತಾವೇಜುಗಳನ್ನು ಬರೆಯತಕ್ಕದ್ದು;

**(ಡಿ) ಮೇಲಿನ ನಿಬಂಧನೆಗಳಗನುಸಾರವಾಗಿ ಅರ್ಜಿಗೆ ಅನುಮತಿ ನೀಡಲಾಗಿದೆ.**

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. ರಿಟ್ ಅರ್ಜಿ ಸಂಖ್ಯೆ: 30202/2017*
*ಮೀನಾ ಲಖೋಟಿಯಾ –ವಿರುದ್ಧ–*
*ಕರ್ನಾಟಕ ರಾಜ್ಯ ಮತ್ತು ಇತರರು (ಉಲ್ಲೇ) 4*
*2. ಟಿ.ಎನ್. ಗೋದವರ್ಮನ್ ತಿರುಮಲಪಾದ*
*–ವಿರುದ್ಧ– ಭಾರತ ಒಕ್ಕೂಟ (ಉಲ್ಲೇ) 5*

ಅರ್ಜಿದಾರರ ಪರ : ಶ್ರೀ ಡಿ.ಎಲ್.ಎನ್. ರಾವ್, ಹಿರಿಯ ನ್ಯಾಯವಾದಿ ಇವರೊಂದಿಗೆ
ಶ್ರೀ ಅನಿರುದ್ಧ್ ಆನಂದ್, ನ್ಯಾಯವಾದಿ
ಪ್ರತ್ಯರ್ಜಿದಾರರ ಪರ : ಶ್ರೀ ಭಾನು ಪ್ರಕಾಶ್ ವಿ.ಜಿ., ಸಹಾಯಕ ಸರ್ಕಾರಿ ನ್ಯಾಯವಾದಿ

## ಆಜ್ಞೆ

**ಮುಖ್ಯ ನ್ಯಾಯಮೂರ್ತಿ ಶ್ರೀ ಅಭಯ್ ಎಸ್. ಓಕಾ:**

ಅರ್ಜಿದಾರರ ಪರ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿ ಮತ್ತು ಪ್ರತ್ಯರ್ಜಿದಾರರ ಪರ ಹಾಜರಾದ ಮಾನ್ಯ ಹೆಚ್ಚುವರಿ ಸರ್ಕಾರಿ ನ್ಯಾಯವಾದಿ ಇವರೀರ್ವರ ವಾದಗಳನ್ನು ಆಲಿಸಲಾಯಿತು ಮತ್ತು ಅವರ ಸಮ್ಮತಿಯೊಂದಿಗೆ ವಿಷಯವನ್ನು ಅಂತಿಮ ವಿಲೆಗೆ ತೆಗೆದುಕೊಳ್ಳಲಾಗಿದೆ.

2. ಕಬ್ಬಿಣದ ಅದಿರು ಮತ್ತು ಮ್ಯಾಂಗನೀಸ್ ಗಣಿಗಾರಿಕೆ ಗುತ್ತಿಗೆಯ ಮಂಜೂರಾತಿಗಾಗಿ 1ನೇ ಆಗಸ್ಟ್, 2006ರಂದು ಅರ್ಜಿದಾರರು ಈ ಅರ್ಜಿಯನ್ನು

ಸಲ್ಲಿಸಿದ್ದಾರೆ. ಖನಿಜ ರಿಯಾಯಿತಿ ನಿಯಮಗಳು, 1960ರ (ಸಂಕ್ಷಿಪ್ತವಾಗಿ "1960ರ ಸದರಿ ನಿಯಮಗಳು) 22(1)ನೇ ನಿಯಮದ ಮೇರೆಗೆ ಈ ಅರ್ಜಿಯನ್ನು ಸಲ್ಲಿಸಲಾಗಿದೆ. ಗಣಿಗಾರಿಕೆ ಸಂಬಂಧಿ ನಕ್ಷೆಯನ್ನು ಸಲ್ಲಿಸಿದ ನಂತರ, ಅರ್ಜಿದಾರರು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ತೀರುವಳಿ ಪಡೆದಿದ್ದಾರೆ. 19ನೇ ಜೂನ್, 2010ರ ಆದೇಶದ ಮೂಲಕ ಕರ್ನಾಟಕ ರಾಜ್ಯವು, ದಿಂಡದಹಳ್ಳಿ ಗ್ರಾಮದ ಸರ್ವೆ ಸಂಖ್ಯೆ: 12/ಪಿ2, 19/15, 14/1ಬಿ1 ಇವುಗಳಲ್ಲಿ 10.24 ಎಕರೆಗಳ ಪ್ರದೇಶದ ಮೇಲೆ ಗಣಿ ಗುತ್ತಿಗೆಯನ್ನು ಮಂಜೂರು ಮಾಡಿದೆ. ಗಣಿಗಳು ಮತ್ತು ಖನಿಜಗಳು (ಅಭಿವೃದ್ಧಿ ಮತ್ತು ನಿಯಂತ್ರಣ) ಅಧಿನಿಯಮ, 1957ರ (ಸಂಕ್ಷಿಪ್ತವಾಗಿ "1957ರ ಸದರಿ ಅಧಿನಿಯಮ) ಉಪಬಂಧಗಳನ್ನು ತಿದ್ದುಪಡಿ ಮಾಡಲು ಕೇಂದ್ರ ಸರ್ಕಾರವು 2015ರ ಅಧಿನಿಯಮ ಸಂಖ್ಯೆ: 10ನ್ನು ರಚಿಸಿದೆ. 2015ರ ಅಧಿನಿಯಮ ಸಂಖ್ಯೆ: 10ರ ಮೂಲಕ ಪರಿಣಾಮಕಾರಿಯಾದ ಈ ತಿದ್ದುಪಡಿಗಳು ದಿನಾಂಕ: 12ನೇ ಜನವರಿ, 2015ರಿಂದ ಜಾರಿಗೆ ಬಂದಿದ್ದು, 2.47 ಹೆಕ್ಟೇರುಗಳ (ಅಂದಾಜು 6.2 ಎಕರೆಗಳ) ಪ್ರದೇಶದ ಮೇಲೆ ಅರ್ಜಿದಾರನಿಗೆ ಗಣಿಗಾರಿಕೆ ಗುತ್ತಿಗೆಯನ್ನು ಮತ್ತೊಮ್ಮೆ ಮಂಜೂರು ಮಾಡಿ ರಾಜ್ಯ ಸರ್ಕಾರವು ಆದೇಶ ಹೊರಡಿಸಿದೆ. ಖನಿಜಗಳ (ಪರಮಾಣು ಮತ್ತು ಜಲ ಇಂಗಾಲ ಇಂಧನ ಖನಿಜಗಳನ್ನು ಹೊರತುಪಡಿಸಿ) ರಿಯಾಯಿತಿ ನಿಯಮಗಳು, 2016ನ್ನು (ಸಂಕ್ಷಿಪ್ತವಾಗಿ "2016ರ ಸದರಿ ನಿಯಮಗಳು) ಅನ್ವಯಿಸುವ ಮೂಲಕ 1957ರ ಸದರಿ ಅಧಿನಿಯಮದ ತಿದ್ದುಪಡಿಯಾದ ಉಪಬಂಧಗಳ ಪ್ರಕಾರ ಅರ್ಜಿಯನ್ನು ಪರಿಗಣಿಸಿದ ನಂತರ ಈ ಆದೇಶವನ್ನು ಹೊರಡಿಸಲಾಗಿದೆ.

3. ಭಾರತ ಸಂವಿಧಾನದ 226ನೇ ಅನುಚ್ಛೇದದ ಮೇರೆಗೆ ಈ ರಿಟ್ ಅರ್ಜಿಯಲ್ಲಿ ಸಲ್ಲಿಸಿದ ಆಕ್ಷೇಪವೆಂದರೆ, ದಿನಾಂಕ: 6ನೇ ಜನವರಿ, 2017ರ ಸದರಿ ಆದೇಶವನ್ನು ರಾಜ್ಯ ಸರ್ಕಾರವು ಹೊರಡಿಸಿದೆ ಎಂಬುದಾಗಿದೆ. ಹಿಂದಿನ ಆದೇಶದ ನಿಬಂಧನೆಗಳಿಗನುಸಾರವಾಗಿ ಅರ್ಜಿದಾರ ಪರವಾಗಿ ಗುತ್ತಿಗೆಯನ್ನು ಜಾರಿ ಮಾಡಲು ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿ ಮ್ಯಾಂಡಮಾಸ್ ರಿಟ್‌ನ್ನು ನೀಡಲು ಮನವಿ ಮಾಡಿಕೊಳ್ಳಲಾಗಿತ್ತು.

4. ಅರ್ಜಿದಾರರ ಪರ ಹಾಜರಾದ ಮಾನ್ಯ ಹಿರಿಯ ನ್ಯಾಯವಾದಿಗಳು, ***ಮೀನಾ ಲಖೋಟಿಯಾ –ವಿರುದ್ಧ– ಕರ್ನಾಟಕ ರಾಜ್ಯ ಮತ್ತು ಇತರರು***[1] ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠವು ಹೊರಡಿಸಿದ ದಿನಾಂಕ: 31ನೇ ಮೇ, 2019ರ ತೀರ್ಪು ಮತ್ತು ಆದೇಶವನ್ನವಲಂಬಿಸಿದ್ದಾರೆ. ಪ್ರಸ್ತುತ ಮೊಕದ್ದಮೆಯನ್ನು ಸದರಿ ನಿರ್ಣಯದ ಮೂಲಕ ನೇರವಾಗಿ ನಿರ್ವಹಿಸಬಹುದೆಂಬುದು ಅವರ ನಿವೇದನೆಯಾಗಿದೆ.

5. 2015ರ ಅಧಿನಿಯಮ ಸಂಖ್ಯೆ 10ರ ಮೂಲಕ ತಿದ್ದುಪಡಿಯಾದಂತೆ 1957ರ ಸದರಿ ಅಧಿನಿಯಮದ 10–ಎ ಪ್ರಕರಣದ (1)ನೇ ಉಪ–ಪ್ರಕರಣವು ಈ ಮೊಕದ್ದಮೆಯಲ್ಲಿ ಅನ್ವಯವಾಗುತ್ತದೆ; ಆದುದರಿಂದ, ಗಣಿ ಗುತ್ತಿಗೆಯನ್ನು 1957ರ ಸದರಿ ಅಧಿನಿಯಮದ 10–ಎ ಪ್ರಕರಣದ (2)ನೇ ಉಪ–ಪ್ರಕರಣದ (ಸಿ) ಖಂಡಕ್ಕನುಸಾರವಾಗಿ ಮಾತ್ರ ಜಾರಿಗೊಳಿಸಬಹುದು ಎಂಬುದು ಮಾನ್ಯ ಹೆಚ್ಚುವರಿ ಸರ್ಕಾರಿ ನ್ಯಾಯವಾದಿಯ ನಿವೇದನೆಯಾಗಿದೆ. ದಿನಾಂಕ: 4ನೇ ಮಾರ್ಚ್ 2016ರಿಂದ ಜಾರಿಗೆ ಬಂದಿರುವ 2016ರ ಸದರಿ ನಿಯಮಗಳ ಉಪಬಂಧಗಳ ಕಡೆಗೆ ಅವರು ನಮ್ಮ ಗಮನವನ್ನು ಸೆಳೆದಿದ್ದಾರೆ. ಇದಲ್ಲದೆ ಅವರು, ಗುತ್ತಿಗೆಯನ್ನು ದಿನಾಂಕ: 11ನೇ ಜನವರಿ 2017ರಂದು ಅಥವಾ ಅದಕ್ಕೆ ಮುಂಚೆ ದಿನಾಂಕ: 19ನೇ ಜೂನ್ 2010ರ ಆದೇಶದ ಆಧಾರದ ಮೇಲೆ ಜಾರಿಗೊಳಿಸಿರುವುದರಿಂದ, ಅರ್ಜಿದಾರನು 1957ರ ಸದರಿ ಅಧಿನಿಯಮದ 10ಎ ಪ್ರಕರಣದ (2)ನೇ ಉಪ–ಪ್ರಕರಣದ (ಸಿ) ಖಂಡದ ಅಡಿಯಲ್ಲಿ ತನ್ನ ಹಕ್ಕನ್ನು ಕಳೆದುಕೊಂಡಿದ್ದಾನೆ; ಆದುದರಿಂದ, 1957ರ ಸದರಿ ಅಧಿನಿಯಮದ 10–ಎ ಪ್ರಕರಣದ (1)ನೇ ಉಪ–ಪ್ರಕರಣದ (ಸಿ) ಖಂಡದ ಅಡಿಯಲ್ಲಿ ಆದೇಶವನ್ನು ಹೊರಡಿಸುವುದು ರಾಜ್ಯ ಸರ್ಕಾರಕ್ಕೆ ಕಡ್ಡಾಯವಾಗಿರಲಿಲ್ಲವೆಂದು ವಾದಿಸಿ, 2016ರ ಸದರಿ ನಿಯಮಗಳ 8ನೇ ನಿಯಮದ (4)ನೇ ಉಪ–ನಿಯಮವನ್ನವಲಂಬಿಸಿದ್ದಾರೆ. ಅಲ್ಲದೆ ಅವರು, ದಿನಾಂಕ: 3ನೇ ಫಬ್ರವರಿ 2017ರ ***ಟಿ.ಎನ್. ಗೋದವರ್ಮನ್ ತಿರುಮಲಪಾದ –ವಿರುದ್ಧ– ಭಾರತ ಒಕ್ಕೂಟ*** ಈ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ಆದೇಶದ

ಕಡೆಗೆ ನಮ್ಮ ಗಮನ ಸೆಳೆದಿದ್ದು, ಸರ್ವೋಚ್ಚ ನ್ಯಾಯಾಲಯವು ನೀಡಿದ ನಿರ್ದೇಶನಗಳಿಗನುಗುಣವಾಗಿ, ಗಣಿಗಾರಿಕೆ ಗುತ್ತಿಗೆಯನ್ನು ಅರ್ಜಿದಾರನು ಕೋರಿರುವಂತೆ ಜಾರಿಗೊಳಿಸಲಾಗುವುದಿಲ್ಲವೆಂದು ವಾದಿಸಿದ್ದಾರೆ.

6. ನಿವೇದನೆಗಳನ್ನು ನಾವು ಪರಿಗಣಿಸಿದ್ದೇವೆ.

7. ಇಡೀ ವಾದ–ವಿವಾದವು, ಅರ್ಜಿದಾರರು ಸಲ್ಲಿಸಿದ ಅರ್ಜಿಗೆ, 1957ರ ಸದರಿ ಅಧಿನಿಯಮದ 10–ಎ ಪ್ರಕರಣದ (1)ನೇ ಉಪ–ಪ್ರಕರಣದ ಅನ್ವಯತೆಯ ಸುತ್ತ ಸುತ್ತುತ್ತದೆ. 1957ರ ಸದರಿ ಅಧಿನಿಯಮದ 10–ಎ ಪ್ರಕರಣದ (1)ನೇ ಉಪ–ಪ್ರಕರಣವನ್ನು 12ನೇ ಜನವರಿ, 2015ರಿಂದ ಜಾರಿಗೆ ಬರುವಂತೆ 2015ರ ಅಧಿನಿಯಮ ಸಂಖ್ಯೆ: 10ರ ಮೂಲಕ ಸೇರಿಸಲಾಗಿದೆ. 1957ರ ಸದರಿ ಅಧಿನಿಯಮದಲ್ಲಿ, 10–ಎ ಪ್ರಕರಣದ ಶೀರ್ಷಿಕೆಯು "ಪ್ರಸ್ತುತ ರಿಯಾಯಿತಿ ಹೊಂದಿದವರು ಮತ್ತು ಅರ್ಜಿದಾರರ ಹಕ್ಕುಗಳು" ಎಂದಿದೆ. 1957ರ ಸದರಿ ಅಧಿನಿಯಮದ 10–ಎ ಪ್ರಕರಣದ (1)ನೇ ಉಪ–ಪ್ರಕರಣವು, ಗಣಿಗಳು ಮತ್ತು ಖನಿಜಗಳು (ಅಭಿವೃದ್ಧಿ ಮತ್ತು ನಿಯಂತ್ರಣ) (ತಿದ್ದುಪಡಿ) ಅಧಿನಿಯಮ, 2015ರ ಪ್ರಾರಂಭದ ದಿನಾಂಕಕ್ಕೆ ಮುಂಚೆ ಸ್ವೀಕರಿಸಿದ ಎಲ್ಲಾ ಅರ್ಜಿಗಳು ಅನರ್ಹಗೊಳ್ಳುತ್ತವೆ ಎಂದು ಉಪಬಂಧಿಸುತ್ತದೆ. 1957ರ ಸದರಿ ಅಧಿನಿಯಮದ 10–ಎ ಪ್ರಕರಣದ (1)ನೇ ಉಪ–ಪ್ರಕರಣದಲ್ಲಿ ಏನೇ ಇದ್ದರೂ, 2015ರ ಸದರಿ ಅಧಿನಿಯಮ ಸಂಖ್ಯೆ: 10ಕ್ಕನುಗುಣವಾಗಿ ಅನುಷ್ಠಾನಗೊಳಿಸಲಾದ ತಿದ್ದುಪಡಿಯ ಪ್ರಾರಂಭದ ನಂತರ ಸಹ (2)ನೇ ಉಪ–ಪ್ರಕರಣದ (ಎ)ಯಿಂದ (ಸಿ)ವರೆಗಿನ ಖಂಡಗಳ ಮೂಲಕ ನಿರ್ವಹಿಸಲಾಗುವ ಅರ್ಜಿಗಳು ಅರ್ಹವಾಗಿರುತ್ತವೆ ಎಂದು ಉಪಬಂಧಿಸುವ ಮೂಲಕ ಪಡೆದ 10–ಎ ಪ್ರಕರಣಕ್ಕೆ 1957ರ ಸದರಿ ಅಧಿನಿಯಮದ 10–ಎ ಪ್ರಕರಣದ (2)ನೇ ಉಪ–ಪ್ರಕರಣವು ಹೊರತಾದುದಾಗಿದೆ.

8. 1957ರ ಸದರಿ ಅಧಿನಿಯಮದ 10–ಎ ಪ್ರಕರಣದ (1)ನೇ ಉಪ–ಪ್ರಕರಣವನ್ನು ಪರಿಶೀಲಿಸಲಾಗಿ, ದಿನಾಂಕ: 12ನೇ ಜನವರಿ 2015ರಂದು

ಇದ್ದಂತೆ, ವಿಲೆ ಮಾಡದಿರುವ ಗುತ್ತಿಗೆ ಮಂಜೂರಾತಿಗೆ ಸಂಬಂಧಿಸಿದಂಥ ಅರ್ಜಿಗಳನ್ನು ಕುರಿತು ಅದು ನಿಶ್ಚಿತವಾಗಿ ವ್ಯವಹರಿಸುತ್ತದೆ ಎಂಬುದು ಕಂಡುಬರುತ್ತದೆ. 1957ರ ಸದರಿ ಅಧಿನಿಯಮದ 10–ಎ ಪ್ರಕರಣದ (1)ನೇ ಉಪ–ಪ್ರಕರಣದಂತೆ ದಿನಾಂಕ: 12ನೇ ಜನವರಿ 2015ಕ್ಕೆ ಮುಂಚೆ ಸ್ವೀಕರಿಸಿದ ಎಲ್ಲಾ ಅರ್ಜಿಗಳು ಅನರ್ಹಗೊಳ್ಳುತ್ತವೆ ಎಂಬ ಸಂಗತಿ ಸ್ಪಷ್ಟವಾಗಿದೆ. ಅರ್ಜಿಗಳನ್ನು ಕುರಿತು ಈಗಾಗಲೇ ನಿರ್ಧಾರ ಕೈಗೊಂಡು, ದಿನಾಂಕ: 12ನೇ ಜನವರಿ 2015ಕ್ಕೆ ಮುಂಚೆ ಗಣಿ ಗುತ್ತಿಗೆಗಳನ್ನು ಮಂಜೂರು ಮಾಡಲು ರಾಜ್ಯ ಸರ್ಕಾರವು ನಿರ್ಣಯವನ್ನು ತೆಗೆದುಕೊಂಡಿರುವಲ್ಲಿ, ಸಹಜವಾಗಿಯೇ 1957ರ ಸದರಿ ಅಧಿನಿಯಮದ 10–ಎ ಪ್ರಕರಣದ (1)ನೇ ಉಪ–ಪ್ರಕರಣವು ಅನ್ವಯವಾಗುವುದಿಲ್ಲ. 10–ಎ ಪ್ರಕರಣದ (1)ನೇ ಉಪ–ಪ್ರಕರಣವು, ಈಗಾಗಲೇ ನಿರ್ಧರಿಸಲಾಗಿರುವ ಯಾವುದೇ ಅರ್ಜಿಯನ್ನು ಅನರ್ಹಗೊಳಿಸುವುದಿಲ್ಲ; 1957ರ ಸದರಿ ಅಧಿನಿಯಮದ 10–ಎ ಪ್ರಕರಣದ (2)ನೇ ಉಪ–ಪ್ರಕರಣದಲ್ಲಿನ ಉಪಬಂಧಗಳನ್ನು ಅನ್ವಯಿಸುವ ಯಾವುದೇ ಸಂದರ್ಭ ಅಲ್ಲಿ ಬರುವುದಿಲ್ಲ. ಪ್ರಸ್ತುತ ಮೊಕದ್ದಮೆಯಲ್ಲಿ, 1960ರ ಸದರಿ ನಿಯಮಗಳ 22(1)ನೇ ನಿಯಮದ ಅಡಿಯಲ್ಲಿ ಸಲ್ಲಿಸಿದ ಅರ್ಜಿಯನ್ನು ಗಣಿಗಾರಿಕೆ ಗುತ್ತಿಗೆಯ ಮಂಜೂರಾತಿಯ ಆದೇಶವನ್ನು ಹೊರಡಿಸುವ ಮೂಲಕ ರಾಜ್ಯ ಸರ್ಕಾರವು ದಿನಾಂಕ: 19ನೇ ಜೂನ್ 2010ರ ಆದೇಶದ ಮೂಲಕ ಈಗಾಗಲೇ ವಿಲೆ ಮಾಡಿದೆ.

9. ಮಾನ್ಯ ಹೆಚ್ಚುವರಿ ಸರ್ಕಾರಿ ನ್ಯಾಯವಾದಿಗಳು, 2016ರ ಸದರಿ ನಿಯಮಗಳ 8ನೇ ನಿಯಮದ (4)ನೇ ಉಪ–ನಿಯಮವನ್ನು ಅವಲಂಬಿಸಿರುವುದು ಅವರಿಗೆ ಸಹಾಯಕವಾಗುವುದಿಲ್ಲ. ಇದಕ್ಕೆ ಕಾರಣ 1957ರ ಸದರಿ ಅಧಿನಿಯಮದ 10–ಎ ಪ್ರಕರಣದ (2)ನೇ ಉಪ–ಪ್ರಕರಣದ (ಸಿ) ಖಂಡದ ಉಪಬಂಧಗಳ ಮೇರೆಗಿನ ಹಕ್ಕುಗಳನ್ನು ಕುರಿತು ನಿಯಮ 8 ವ್ಯವಹರಿಸುತ್ತದೆ ಎಂಬುದಾಗಿದೆ. 1957ರ ಸದರಿ ಅಧಿನಿಯಮದ 10–ಎ ಪ್ರಕರಣದ (1)ನೇ ಉಪ–ಪ್ರಕರಣವು ಅನ್ವಯವಾಗು–ವುದಿಲ್ಲವಾದರೆ, ಸಹಜವಾಗಿಯೇ, (2)ನೇ ಉಪ–ಪ್ರಕರಣವು (1)ನೇ ಉಪ–ಪ್ರಕರಣಕ್ಕೆ ಹೊರತಾದುದಾಗಿರುವುದರಿಂದಾಗಿ 1957ರ ಸದರಿ ಅಧಿನಿಯಮದ 10–ಎ ಪ್ರಕರಣದ (2)ನೇ ಉಪ–ಪ್ರಕರಣದ (ಸಿ) ಖಂಡವು ಅನ್ವಯವಾಗುವುದಿಲ್ಲ.

10–ಎ ಪ್ರಕರಣದ (1)ನೇ ಉಪ–ಪ್ರಕರಣವು ಮೇಲಿನ ಕಾರಣಗಳಿಗಾಗಿ ಅನ್ವಯವಾಗುವುದಿಲ್ಲವಾದ್ದರಿಂದ, 10–ಎ ಪ್ರಕರಣದ (2)ನೇ ಉಪ–ಪ್ರಕರಣದ (ಸಿ) ಖಂಡವು ಅನ್ವಯವಾಗುವುದಿಲ್ಲ; ಹಾಗಾಗಿ, 2016ರ ಸದರಿ ನಿಯಮಗಳ 8ನೇ ನಿಯಮದ (4)ನೇ ಉಪ–ನಿಯಮದಲ್ಲಿ ಉಪಬಂಧಿಸಿದ ಪರಿಣಾಮಗಳು ಈ ಮೊಕದ್ದಮೆಯ ಸಂಗತಿಗಳಲ್ಲಿ ಸಾಧಿತವಾಗುವುದಿಲ್ಲ.

10. ಈಗ, ಇಂಥಹುದೇ ಮೊಕದ್ದಮೆಯಾದ ***ಮೀನಾ ಲಖೋಟಿಯಾ*** (ಮೇಲೆ ಹೇಳಿದ) ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ವಿಭಾಗೀಯ ಪೀಠದ ನಿರ್ಣಯದ ವಿಷಯಕ್ಕೆ ಬಂದರೆ, ಗಣಿಗಾರಿಕೆ ಗುತ್ತಿಗೆ ಮಂಜೂರಾತಿಗಾಗಿ ಸಲ್ಲಿಸಿದ ಅರ್ಜಿಯ ಆಧಾರದ ಮೇಲೆ ಕೇಂದ್ರ ಸರ್ಕಾರವು, 1957ರ ಸದರಿ ಅಧಿನಿಯಮದ 5ನೇ ಪ್ರಕರಣದ (1)ನೇ ಉಪ–ಪ್ರಕರಣವು ಅಗತ್ಯಪಡಿಸಿದಂತೆ ಹಿಂದಿನ ಅನುಮೋದನೆಗಳನ್ನು ತಿಳಿಸಿದ್ದ ಸಂದರ್ಭದಲ್ಲಿ, 1957ರ ಸದರಿ ಅಧಿನಿಯಮದ 10–ಎ ಪ್ರಕರಣದ (2)ನೇ ಉಪ–ಪ್ರಕರಣದ (ಸಿ) ಖಂಡವು ಅನ್ವಯವಾಗುವುದು ಎಂದು ಹಾಗೂ 1957ರ ಸದರಿ ಅಧಿನಿಯಮದ 5ನೇ ಮತ್ತು 8ನೇ ಪ್ರಕರಣಗಳ ಅನುಸರಣೆಯಲ್ಲಿ ಗಣಿಗಾರಿಕೆ ಗುತ್ತಿಗೆಯುನ್ನು ಮಂಜೂರು ಮಾಡಲಾಗಿದ್ದ ಸಂದರ್ಭಕ್ಕೆ ಅನ್ವಯವಾಗುವುದಿಲ್ಲವೆಂದು ಈ ನ್ಯಾಯಾಲಯದ ವಿಭಾಗೀಯ ಪೀಠವು ನಿರ್ಣಯಕ್ಕೆ ಬಂದಿದೆ.

11. ರಾಜ್ಯ ಸರ್ಕಾರವು ಹೊರಡಿಸಿದ ದಿನಾಂಕ: 19ನೇ ಜೂನ್, 2010ರ ಆದೇಶವನ್ನು ನಾವು ಎಚ್ಚರಿಕೆಯಿಂದ ಪರಿಶೀಲಿಸಿದ್ದೇವೆ. 1957ರ ಸದರಿ ಅಧಿನಿಯಮದ 8ನೇ ಪ್ರಕರಣದೊಂದಿಗೆ ಓದಲಾಗುವ 5ನೇ ಪ್ರಕರಣದ ಮೇರೆಗಿನ ಅಧಿಕಾರಗಳನ್ನು ಚಲಾಯಿಸಿ, ರಾಜ್ಯ ಸರ್ಕಾರವು 20 ವರ್ಷಗಳ ಅವಧಿಗಾಗಿ ಗಣಿಗಾರಿಕೆ ಗೇಣಿಯನ್ನು ಮಂಜೂರು ಮಾಡಲು ಅನುಮತಿ ನೀಡಿದೆ ಎಂದು ಅದು ಸ್ಪಷ್ಟವಾಗಿ ಉಪಬಂಧಿಸುತ್ತದೆ.

12. ಸದರಿ ಆದೇಶದಲ್ಲಿ ಬಳಸಿದ ವ್ಯಕ್ತ ಭಾಷೆಯ ಹಿನ್ನಲೆಯಲ್ಲಿ, ದಿನಾಂಕ: 12ನೇ ಜನವರಿ, 2015ಕ್ಕೆ ಮುಂಚೆ ಗಣಿಗಾರಿಕೆ ಗುತ್ತಿಗೆಯ ಮಂಜೂರಾತಿಯ ಆದೇಶವನ್ನು ಹೊರಡಿಸಿ ಈಗಾಗಲೇ ಅದನ್ನು ನಿರ್ಧರಿಸಿರುವುದರಿಂದ, 1957ರ ಸದರಿ ಅಧಿನಿಯಮದ 10–ಎ ಪ್ರಕರಣದ (1)ನೇ ಉಪ–ಪ್ರಕರಣವನ್ನು ಅನ್ವಯಿಸಿ ಅರ್ಜಿದಾರರು ಸಲ್ಲಿಸಿದ ಅರ್ಜಿಯು ಅನರ್ಹವಾಗುವ ಪ್ರಶ್ನೆಯೇ ಇಲ್ಲ. ಸಂದರ್ಭಗಳು ಹೀಗಿರುವಲ್ಲಿ, ದಿನಾಂಕ: 12ನೇ ಜುಲೈ, 2015ರಿಂದ ಜಾರಿಗೆ ಬರುವಂತೆ ತಿದ್ದುಪಡಿಯಾದ 1957ರ ಸದರಿ ಅಧಿನಿಯಮದ 10–ಎ ಪ್ರಕರಣವನ್ನು ಮೊಕದ್ದಮೆಯ ಸಂಗತಿಗಳ ಪರಿಗಣನೆಯಿಂದ ಹೊರಗಿಡಬೇಕಾಗುತ್ತದೆ.

13. ದಿನಾಂಕ: 19ನೇ ಜೂನ್ 2010ರ ಆದೇಶದ ಪರಿಭಾಷೆಯಲ್ಲಿ ಗುತ್ತಿಗೆಯನ್ನು ಜಾರಿಗೊಳಿಸುವುದರಿಂದ ರಾಜ್ಯ ಸರ್ಕಾರವನ್ನು ತಡೆಯುವ ಈ ಮೊಕದ್ದಮೆಯಲ್ಲಿ ತೋರಿಸಿದ ಯಾವುದೇ ಇತರ ನಿರ್ಬಂಧವಿರುವುದಿಲ್ಲ.

14. ಈಗ, ದಿನಾಂಕ: 3ನೇ ಫೆಬ್ರವರಿ 2017ರ ಆದೇಶದ ವಿಷಯಕ್ಕೆ ಬಂದಲ್ಲಿ, 1957 ಸದರಿ ಅಧಿನಿಯಮ ಮತ್ತು ಇತರ ಶಾಸನಾತ್ಮಕ ಅಗತ್ಯಗಳಿಗನುಸಾರವಾಗಿ ಹೊರತು ಕರ್ನಾಟಕ ರಾಜ್ಯವು ಯಾವುದೇ ಗಣಿಗಾರಿಕೆ ಗುತ್ತಿಗೆಯನ್ನು ಮಂಜೂರು ಮಾಡುವಂತಿಲ್ಲವೆಂಬುದು ಸರ್ವೋಚ್ಚ ನ್ಯಾಯಾಲಯದ ನಿರ್ದೇಶನವಾಗಿದೆ.

15. ದಿನಾಂಕ: 19ನೇ ಜೂನ್, 2010ರ ಆದೇಶಕ್ಕನುಸಾರವಾಗಿ 1957ರ ಸದರಿ ಅಧಿನಿಯಮದ ಉಪಬಂಧಗಳಿಗನುಸಾರವಾಗಿ, ಗಣಿಗಾರಿಕೆ ಗುತ್ತಿಗೆಯನ್ನು ಜಾರಿಗೊಳಿಸಬೇಕೆಂಬುದು ಅರ್ಜಿದಾರರ ಕೋರಿಕೆಯಾಗಿದೆ. ಆದುದರಿಂದ, ಸರ್ವೋಚ್ಚ ನ್ಯಾಯಾಲಯದ ಆದೇಶವು ಅರ್ಜಿದಾರರ ಹಾದಿಗೆ ಅಡ್ಡಬರುವುದೆಂದು ನಮಗೆ ಅನಿಸುತ್ತಿಲ್ಲ.

16. ದಿನಾಂಕ: 6ನೇ ಜನವರಿ 2017ರ ಪ್ರಶ್ನಿತ ಆದೇಶವನ್ನು ಪರಿಶೀಲಿಸಲಾಗಿ, 1957ರ ಸದರಿ ಅಧಿನಿಯಮದ 10–ಎ ಪ್ರಕರಣದ (2)ನೇ ಉಪ–ಪ್ರಕರಣದ (ಸಿ)

ಖಂಡವು ಮೊಕದ್ದಮೆಯ ಸಂಗತಿಗಳಿಗೆ ಅನ್ವಯವಾಗುವವು ಎಂಬ ಊಹೆಯ ಆಧಾರದ ಮೇಲೆ ಅದು ಮುಂದುವರೆದಿದೆ ಎಂಬುದು ಕಂಡುಬರುತ್ತದೆ. ಸದರಿ ಊಹೆಯು ಸಂಪೂರ್ಣವಾಗಿ ತಪ್ಪಾದುದಾಗಿದೆ.

17. ತದನುಸಾರವಾಗಿ, ಅರ್ಜಿಯು ಯಶಸ್ವಿಯಾಗಬೇಕು ಮತ್ತು ಹಾಗಾಗಿ, ನಾವು ಈ ಮುಂದಿನ ಆದೇಶವನ್ನು ಹೊರಡಿಸುತ್ತೇವೆ:

ಎ) ದಿನಾಂಕ: 6ನೇ ಜನವರಿ 2017ರ ಪ್ರಶ್ನಿತ ಆದೇಶವನ್ನು ಈ ಮೂಲಕ ರದ್ದುಗೊಳಿಸಲಾಗಿದೆ ಮತ್ತು ತಳ್ಳಿಹಾಕಲಾಗಿದೆ;

(ಬಿ) ರಿಟ್ ಅರ್ಜಿಯ (2)ನೇ ಮನವಿ ಖಂಡದ ನಿಬಂಧನೆ–ಗನುಸಾರವಾಗಿ ಮ್ಯಾಂಡಮಾಸ್ ರಿಟ್ ಇರುವುದು;

(ಸಿ) ಇಂದಿನಿಂದ ಮೂರು ತಿಂಗಳುಗಳ ಅವಧಿಯ ಒಳಗಾಗಿ ರಾಜ್ಯ ಸರ್ಕಾರವು ಅವಶ್ಯಕ ದಸ್ತಾವೇಜುಗಳನ್ನು ಬರೆಯತಕ್ಕದ್ದು;

(ಡಿ) ಮೇಲಿನ ನಿಬಂಧನೆಗಳಿಗನುಸಾರವಾಗಿ ಅರ್ಜಿಗೆ ಅನುಮತಿ ನೀಡಲಾಗಿದೆ.

---